ಸಾಕ್ಷಿಯನ್ನು ದಿನಾಂಕಃ 12.09.2024 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲು ಃ- ಪ್ರತಿವಾದಿ *3* ಮತ್ತು *4* ರವರ ಪರ ಶ್ರೀ. ವಿ ಎಸ್ ವಿ ವಕೀಲರಿಂದ**

ಅರ್ಮುಗಂಗಮ್ ಕುಟುಂಬದ ಬಗ್ಗೆ ಗೊತ್ತಿರುತ್ತದೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ಅರ್ಮುಗಂಗಮ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ 3 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು ಎಂದು ನುಡಿಯುತ್ತಾರೆ. ಅರ್ಮುಗಂಗಮ್ ರವರ ಹೆಣ್ಣುಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವ ಬಗ್ಗೆ ಗೊತ್ತಿರುತ್ತದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಅರ್ಮುಗಂಗಮ್ ರವರಿಗೆ ದಾವಾ ಸ್ವತ್ತುಗಳು ಪಿತ್ರಾರ್ಜಿತ ಸ್ವತ್ತುಗಳಾ ಅಥವಾ ಸ್ವಯಾರ್ಜಿತ ಸ್ವತ್ತುಗಳಾಗಿರುತ್ತವೆಯಾ ಎಂದರೆ ಪಿತ್ರಾರ್ಜಿತ ಸ್ವತುಗಳಾಗಿರುಬಹುದು ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳು ಅರ್ಮುಗಂಗಮ್ ರವರಿಗೆ ಯಾರ ಮುಖಾಂತರ ಬಂದಿರುತ್ತದೆ ಎಂದರೆ ನನ್ನ ತಾತ ಲಕ್ಷಣ್ ಮತ್ತು ಅರ್ಮುಗಂಗಮ್ ರವರು

ಅಣ್ಣತಮ್ಮಂದಿರಾಗಿದ್ದು, ಯಾವ ರೀತಿ ಬಂದಿರುತ್ತದೆ ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲಾತಿಗಳನ್ನು ನೀವು ನೋಡಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ.

ನಾಯಗಮ್ ರವರು ಯಾವಾಗ ತೀರಿಕೊಂಡಿರುತ್ತಾರೆ ಎಂದರೆ ನೆನಪಿಲ್ಲ ಎಂದು ನುಡಿಯುತ್ತಾರೆ. ನಾಯಗಮ್ ಮತ್ತು ಅರ್ಮುಗಂಗಮ್ ರವರು ಏನಾಗಬೇಕು ಎಂದರೆ ನನ್ನ ಅಜ್ಜಿ ಮತ್ತು ತಾತನಾಗಬೇಕು ಎಂದು ನುಡಿಯುತ್ತಾರೆ. ವಾದಿಯರು ಸುಮಾರು 60 ವರುಷಗಳಿಂದ ವೇಲೂರಿನಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ . ಮುಂದುವರೆದು ಅಲ್ಲಿ ಕೆಲಸ ಮಾಡುತ್ತಿರುತ್ತಾರೆ ಎಂದು ನುಡಿಯುತ್ತಾರೆ. ಪ್ರತಿವಾದಿ 2 ರಿಂದ 4 ರವರು ದಾಖಲಾತಿಗಳನ್ನು ಸೃಷ್ಟಿಮಾಡಿರುತ್ತಾರೆ ಎಂದು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ ಪ್ರತಿವಾದಿ 1 ರವರು ಕಾನೂನುಬಾಹಿರವಾಗಿ ಖಾತೆ ಮಾಡಿಕೊಂಡಿರುತ್ತಾರೆಂದು ಹೇಳಿರುತ್ತೀರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಪ್ರತಿವಾದಿ1 ರವರು ಪ್ರತಿವಾದಿ 2 ರಿಂದ 4 ರವರಿಗೆ ಮಾಡಿರುವ ದಾಖಲಾತಿಗಳು ವಾದಿಯರನ್ನು ಬದ್ದಪಡಿಸುವುದಿಲ್ಲವೆಂದು ಹೇಳಿರುತ್ತೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸದರಿ ವಿಚಾರವನ್ನು ಯಾವ ಅದಾರದ ಮೇಲೆ ಹೇಳಿರುತ್ತೀರಿ ಎಂದರೆ ವಾದಿಯರನ್ನು ಬಿಟ್ಟು ಮಾಡಿರುವ ಕಾರಣ ಹೇಳಿರುತ್ತೇನೆ ಎಂದು ನುಡಿಯುತ್ತಾರೆ. ಅರ್ಮುಗಂಗಮ್ ಹಾಗೂ ಲಕ್ಷಣ್ ರವರ ಮಧ್ಯ ವಿಭಾಗ ಅಗಿರುವ ಬಗ್ಗೆ ಗೊತ್ತಿದೆಯಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ಲಕ್ಷಣ್ ರವರಿಗೆ ಎಷ್ಟು ಜನ ಮಕ್ಕಳು ಎಂದರೆ 3 ಜನ ಹೆಂಡತಿಯರು ಇದ್ದು 10 ಜನ ಮಕ್ಕಳು ಇರುತ್ತಾರೆ ಎಂದು ನುಡಿಯುತ್ತಾರೆ.

ದಾವಾ ಸ್ವತ್ತಿನ ಸರ್ವೆ ನಂಬರ್ ಎನು ಎಂದರೆ ಸರ್ವೆ ನಂ 1/3 ಮತ್ತು 2/2 ಎಂದು ನುಡಿಯುತ್ತಾರೆ. ಸರ್ವೆ ನಂ 1/3 ರ ಯಾವ ದಿಕ್ಕಿಗೆ ನಿಮಗೆ ಸೇರಿದ ಸ್ವತ್ತು ಇರುತ್ತದೆ ಎಂದರೆ ಉತ್ತರ ದಿಕ್ಕಿಗೆ ನನ್ನ ತಾತ ಲಕ್ಷಣ್ ರವರಿಗೆ ಸೇರಿದ ಸರ್ವೆ ನಂ 1/3 ರ 27 ಗುಂಟೆ ಜಮೀನು ಇರುತ್ತದೆ ಎಂದು ನುಡಿಯುತ್ತಾರೆ. ನೀವು ಹೇಳುವ ಹಾಗೆ ಯಾವುದೇ ಸ್ವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ವಾದಿಯರ ಮಾತನ್ನು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಮ್ಮ ಮುಖ್ಯ ವಿಚಾರಣಾ ಪತ್ರದ ಅಂಶಗಳನ್ನು ಯಾುರು ಹೇಳಿ ಬರೆಸಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ 1 ರವರು ಯಾವಾಗ ದಾವಾ ಸ್ವತ್ತುಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತುಗಳಲ್ಲಿ ಯಾರು ಯಾರು ಸ್ವಾಧೀನ ಇರುತ್ತಾರೆ ಎಂದರೆ ಮೊದಲಿಗೆ ನಮ್ಮ ಮಾವ ಇದ್ದು ಈಗ ಪ್ರತಿವಾದಿ 3 ರವರು ಇರುತ್ತಾರೆ ಎಂದು ನುಡಿಯುತ್ತಾರೆ. ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ)**

**ಓದಿ ಹೇಳಿ ಕೇಳಿ ಸರಿ ಇದೆ,**

**ಸಹಿ/-**

**(ಮಂಜು ಎಂ)**

**2 ನೇ ಅಪರ ಸಿವಿಲ್ ನ್ಯಾಯಾಧೀಶರು**

**ಮತ್ತು ಜೆಎಂಎಫ್‌ಸಿ, ಕೆ.ಜಿ.ಎಫ್**